



# ಬೇಟೆಗಾರ ನೊಣ!

ಚಿತ್ರ ಲೇಖನ:
ವಿ.ಎಲ್. ಉಪಾಧ್ಯಾಯ

ಆಂಗ್ಲ ಭಾಷೆಯಲ್ಲಿ 'ರಾಬರ್ ಫ್ಲೈ' ಅಥವಾ 'ಅಸ್ಸಾಸಿನ್ ಫ್ಲೈ' ಎಂದು ಕರೆಯಲ್ಪಡುವ ಈ ಕೀಟಗಳು ಎಸಿಲಿಡೇ ಎಂಬ ಕುಟುಂಬದ ನೊಣದ ಜಾತಿಗೆ ಸೇರಿದ ಕೀಟಗಳು. ಇವುಗಳು 'ಕೀಟಜಗತ್ತಿನ ಬೇಟೆಗಾರ' ಎಂದೇ ಪ್ರಸಿದ್ಧಿ ಪಡೆದಿವೆ. ಈ ಜಗತ್ತಿನಲ್ಲಿ ಸುಮಾರು ಏಳು ಸಾವಿರದ ನೂರು ತರಹದ ಬೇಟೆಗಾರ ನೊಣಗಳಿವೆ. ಇವುಗಳು ಇತರ ಸಣ್ಣ ನೊಣಗಳು, ಜೀರುಂಡೆ, ಜೇನ್ನೊಣ, ಇರುವೆ, ಚಿಟ್ಟೆ, ಪತಂಗ, ಜೇಡ ಮತ್ತಿತರ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುತ್ತವೆ.

ನೋಡಲು ಭಯಂಕರವಾಗಿ ಕಾಣುವ ಇವುಗಳಿಗೆ ಆರು ಸದೃಢವಾದ ಮುಳ್ಳುಗಳಿಂದ ಕೂಡಿದ ಕಾಲುಗಳಿವೆ. ಇವು ತಾವು ಬೇಟೆಯಾಡಿದ ಪ್ರಾಣಿಗಳನ್ನು ತಮ್ಮ ಕಾಲುಗಳ ಮಧ್ಯೆ ಹಿಡಿದು ಅಪ್ಪಿಕೊಳ್ಳುವಂತೆ ಮಾಡುತ್ತವೆ. ಇವುಗಳ ಮುಖದಲ್ಲಿ ಮೀಸೆಯಂತಿರುವ ಕೂದಲುಗಳಿವೆ. ಈ ಕೂದಲುಗಳು ಅವುಗಳ ತಲೆಯನ್ನು ರಕ್ಷಿಸುತ್ತದೆ. ಎಲ್ಲಾ ಕೀಟಗಳಿಗಿರುವಂತೆ ಎರಡು ಸಂಯುಕ್ತಾಕ್ಷಿಗಳಿವೆ. ಇವುಗಳ ಮಧ್ಯದಲ್ಲಿ ಮೂರು ಸಣ್ಣ ಕಣ್ಣುಗಳಿವೆ. ನೊಣಗಳಿಗಿರುವಂತಹ ಸೊಂಡಿಲು ಬಹಳ ಸದೃಢವಾಗಿದ್ದು ಇತರ ಪ್ರಾಣಿಗಳ ದೇಹವನ್ನು ಚುಚ್ಚಲು ಸಹಾಯಕವಾಗಿವೆ. ವಿಷಯುಕ್ತ ಹಾವುಗಳಂತೆ ಇವುಗಳು ತಮ್ಮ ಲಾಲಾರಸವನ್ನು ಅಸಹಾಯಕ ಪ್ರಾಣಿಗಳ ದೇಹದೊಳಕ್ಕೆ ತಮ್ಮ ಸೊಂಡಿಲಿನ ಮೂಲಕ ಚುಚ್ಚುತ್ತವೆ. ಈ ಲಾಲಾರಸವು ನರವಿಷ ಮತ್ತು ಕೆಲವು ಜೀರ್ಣಕಾರಿ ಕಿಣ್ವಗಳನ್ನು ಹೊಂದಿರುತ್ತದೆ. ನರವಿಷವು ಬಲಿಪಶುವನ್ನು ನಿಶ್ಚಲಗೊಳಿಸುತ್ತದೆ. ಕಿಣ್ವಗಳು ಅವುಗಳ ದೇಹವನ್ನು ಜೀರ್ಣಿಸುತ್ತವೆ. ನಂತರ ಈ ಬೇಟೆಗಾರ ಕೀಟವು ಜೀರ್ಣಿಸಲ್ಪಟ್ಟ, ದ್ರವರೂಪದ ಆಹಾರವನ್ನು ತನ್ನ ಸೊಂಡಿಲ ಮೂಲಕ ಹೀರುತ್ತದೆ.